ವ್ಯಾಪ್ತಿಯಲ್ಲಿ ಬರುತ್ತದೆ. ಈಗಾಗಲೇ 1.6 ಕಿ.ಮೀ.ಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೈಗೆತ್ತಿಕೊಂಡಿರುತ್ತದೆ ಮತ್ತು ರಕ್ಷಣಾ ಇಲಾಖೆಯ ಭಾಮಿಯಲ್ಲಿ ಬರುವ 1.9. ಕಿ.ಮೀ.ಗಳ ರಸ್ತೆಗೆ ಉದ್ದದ ರಸ್ತೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈ 3.5 ಕಿ.ಮೀ.ಗಳ ಒಟ್ಟು ಅಂದಾಜು ವೆಚ್ಚ 4.12 ಕೋಟಿಗಳು ಉಳಿದ ರಕ್ಷಣಾ ಇಲಾಖೆಯ ಭೂಮಿಯಲ್ಲಿ ಬರುವ 1.9 ಕಿ.ಮೀ.ಗಳ ಉದ್ದದ ವರ್ತುಲ ರಸ್ತೆಯನ್ನು ನಿರ್ಮಿಸಲು ಆ ಇಲಾಖೆಯು ಅಪ್ಪಣೆ ಕೊಟ್ಟ ತಕ್ಷಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಭೂಸ್ವಾದೀನ ತೊಂದರೆ ಹಾಗು ಹಣಕಾಸು ಸಹಾಯದ ವಿಜಿನ್ನಿಯನ್ನು ಗುರುತಿಸುವುದಕ್ಕಾಗಿ, ಈ ಯೋಜನೆಯನ್ನು ಪೂರ್ತಿಗೊಳಿಸುವುದರಲ್ಲಿ ನಿಧಾನವಾಗಿದೆ.

ವಿಶ್ವ ಬ್ಯಾಂಕ್ ಹಣ ಸಹಾಯ ದೊರೆತಲ್ಲಿ, ಹೊರ ವರ್ತುಲ ರಸ್ತೆಯನ್ನು 1995-96ರ ವರ್ಷದೊಳಗಾಗಿ ಪೂರ್ತಿ ಮಾಡಲು ಉದ್ದೇಶಿಸಲಾಗಿದೆ. ವಿಶ್ವ ಬ್ಯಾಂಕ್ನ ಹಣ ಸಹಾಯ ಕೋರಲು ಉದ್ದೇಶಿಸಿರುವ "ಬೆಂಗಳೂರು ಅರ್ಬನ್ ಟ್ರಾನ್ಸ್ಪೋರ್ಟ್ ಪ್ರಾಜೆಕ್ಟ್" ಯೋಜನೆಯಲ್ಲಿ ಇದು ಸೇರಿದೆ. ಬೆಂಗಳೂರು ಅರ್ಬನ್ ಟ್ರಾನ್ಸ್ಪೋರ್ಟ್ ಪ್ರಾಜೆಕ್ಟ್ ಯೋಜನೆಯು, ವಿದೇಶಿ ಸಹಾಯ ಪಡೆವ ಯೋಜನೆಗಳ ರಾಜ್ಯ ಮಟ್ಟದ ಪರಿಶೀಲನಾ ಸಮಿತಿಯ ಪರಿಶೀಲನೆಗೆ ಮಂಡಿಸಲಾಗುತ್ತಿದೆ.

(8) ಸಿ.ಡಿ.ಎಸ್. ನಾಲೆಯ 20ನೇ ಮೈಲಿ ಹತ್ತಿರದ ಸೇತುವೆಯ ಪುನರ್ ನಿರ್ಮಾಣದ ಬಗ್ಗೆ

Smt. DAMAYANTHI BOREGOWDA (SRIRANGAPATNA) : Madam, Speaker, the bridge at 20the Mile of CDS Channel near 79th sluice, is fully demolished during the passing of the railway contractor's scooper which weighted 16 tons. Thus, the Government can claim dameges and compensation from the Railway Contractor. The people are very much inconvenienced. I request you to order for the construction of the Bridge.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನಾನು ಓದುತ್ತೇನೆ.

ಶಾಸಕರಾದ ಶ್ರೀಮತಿ ದಮಯಂತಿ ಬೋರೇಗೌಡರು ಚಿಕ್ಕದೇವರಾಯ ನಾಲೆಯ 20ನೇ ಮೈಲಿಯಲ್ಲಿನ ಸೇತುವೆಗೆ ಉಂಟಾಗಿದ್ದ ಹಾನಿಯ ಬಗ್ಗೆ ಮತ್ತು ಈ ಸ್ಥಳದಲ್ಲಿ ಒಂದು ಹೊಸ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

1990ರ ಡಿಸೆಂಬರ್ ತಿಂಗಳಿನಲ್ಲಿ ಚಿಕ್ಕದೇವರಾಯ ನಾಲೆಯ 20ನೇ ಮೈಲಿಯ ಬಳಿ ರೈಲ್ವೆ ಮಾರ್ಗದ ಕೆಲಸ ನಡೆಯುತ್ತಿದ್ದು, ಸದರಿ ಕೆಲಸದ ಗುತ್ತಿಗೆದಾರರು ಬೃಹತ್ ಯಂತ್ರೋಪಕರಣ ಒಂದನ್ನು ಈ ನಾಲೆಯ ಸೇತುವೆ ಮೇಲೆ ಹಾಯಿಸಿದಾಗ ಸೇತುವೆಗೆ ಹಾನಿ ಉಂಟಾಗಿತ್ತು.

ಸಂಬಂಧಪಟ್ಟ ರೈಲ್ವೆ ಕೆಲಸದ ಗುತ್ತಿಗೆದಾರರು ಸೇತುವೆಯ ದುರಸ್ತಿಯನ್ನು ಪೂರ್ಣವಾಗಿ ಅವರ ಖರ್ಚಿನಲ್ಲೇ ಕೈಗೊಂಡು ಸೇತುವೆಯನ್ನು ಮೊದಲಿನ ಸ್ಥಿತಿಗೆ ತಂದಿರುತ್ತಾರೆ.

ಮೇಲೆ ತಿಳಿಸಿದ ಸೇತುವೆಯು ಮಂಟಪ ನಮೂನೆಯ ಸೇತುವೆಯಾಗಿದ್ದು, ಈ ಹಳೆಯ ಕಾಲದ ಸೇತುವೆಗೆ ಬದಲು ಹೊಸದಾಗಿ ಕಾಂಕ್ರೀಟ್ ಸೇತುವೆಯನ್ನು ನಿರ್ಮಾಣ ಮಾಡಬೇಕೆಂದು ಮಾನ್ಯ ಶಾಸಕರು ಕೋರಿದ್ದಾರೆ.

ಈ ಕಾಮಗಾರಿಗೆ ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರು ಹೊಸದಾಗಿ ಸಿಮೆಂಟ್ ಕಾಂಕ್ರೀಟ್ ಸೇತುವೆಯನ್ನು ನಿರ್ಮಿಸುವ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸುತ್ತಿದ್ದಾರೆ. ಈ ಪ್ರಸ್ತಾವೆಯು ಸರ್ಕಾರಕ್ಕೆ ಬಂದ ಕೂಡಲೇ ಈ ಕಾಮಗಾರಿಗೆ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

(9) ರಾಯಬಾಗ್ ತಾಲ್ಲೂಕಿನ ಕುಡಚಿ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಕರ್ಯದ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಜನರಿಗೆ ಹೇಳತೀರದಷ್ಟು ಕುಡಿಯುವ ನೀರಿನ ತೊಂದರೆಯಾಗಿದೆ. ಕುಡಚಿ ಪಟ್ಟಣಕ್ಕೆ ಸುಮಾರು ವರ್ಷಗಳ ಹಿಂದೆ ಕೃಷ್ಣಾನದಿಯಿಂದ ಕುಡಿಯುವ ಯೋಚನೆ ಮಾಡಲಾಗಿದೆ. ಆದರೆ ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ಬಹುದಿನಗಳ ಹಿಂದೆ ಕಾರ್ಯರೂಪಕ್ಕೆ ಬಂದಿರುವ ಕುಡಿಯುವ ನೀರಿನ ಯೋಜನೆ ಜನರ ಬೇಡಿಕೆಯಂತೆ ನೀರು ಪೂರೈಕೆಯಾಗಲು ಅಸಾಧ್ಯಗೊಂಡಿದೆ. ಈ ವಿಷಯವನ್ನು ಈ ಹಿಂದೆ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಕರ್ನಾಟಕ ನೀರು ಸಗಬರಾಜು ಮಂಡಲಿಯಿಂದ ವಿಶೇಷವಾದಂಥ ಯೋಜನೆಯನ್ನು ರೂಪಿಸಿ ಜನರಿಗೆ ಆಗುತ್ತಿರುವ ನೀರಿನ ತೊಂದರೆಯನ್ನು ಖಾಯಂ ತ್ವರಿತವಾಗಿ ಬಗೆಹರಿಸುವಂತೆ ನಗರಾಭಿವೃದ್ಧಿ ಮಂತ್ರಿಗಳು ಆದೇಶವನ್ನಿತ್ತು ಹಾಗೂ ಬರಗಾಲ ಕಾಮಗಾರಿಯಲ್ಲಿ ಹೆಚ್ಚಿನ ಹಣಕಾಸಿನ ನೆರವು ನೀಡಿ ಪಟ್ಟಣ ಪ್ರದೇಶದಲ್ಲಿ ಆಳವಾದಂಥ ಕೊಳವೆ ಬಾವಿಗಳನ್ನು ತೋಡಿ ನೀರಿನ ಬವಣೆಯನ್ನು ದೂರ ಮಾಡಲು ಒತ್ತಾಯಿಸುತ್ತೇನೆ ಹಾಗೂ ವಿವರವಾದಂಥ ಹೇಳಿಕೆಯನ್ನು ಸದನದಲ್ಲಿ ನೀಡುವಂತೆ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ) : ಸನ್ಮಾನ್ಯ ಅಧ್ಯಕ್ಷೆಯವರೇ,

1981ರ ಜನಗಣತಿಯ ಪ್ರಕಾರ ಕುಡಚಿ ಪಟ್ಟಣದ ಜನಸಂಖ್ಯೆಯು 18,491 ಆಗಿದ್ದು ಹಾಗೂ ಈಗಿನ ಜನಸಂಖ್ಯೆಯು ಸುಮಾರು 25,000 ಆಗಿರಬಹುದು. ಹಾಲಿ ನೀರು ಸರಬರಾಜು ಕೃಷ್ಣಾ ನದಿಯಿಂದ ಆಗುತ್ತಿದೆ. ಬೇಸಿಗೆಯಲ್ಲಿ ಕೃಷ್ಣಾ ನದಿಯು ಬತ್ತಿಹೋಗುತ್ತದೆ. ಆದರೂ ಈ ನದಿಯ ಕಣಿವೆಯಲ್ಲಿ ಅಗೆದಿರುವ ಎರಡು ತೆರದ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಹಾಲಿ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು 41.40 ಲಕ್ಷ ರೂಪಾಯಿಗಳ ಒಂದು ರೇಖಾ ಅಂದಾಜನ್ನು ತಯಾರಿಸಲಾಗಿದೆ. ಹಾಗೂ ವಿವರವಾದ ಸರ್ವೆ ಮಾಡಿ ಅಂದಾಜು ಮತ್ತು ನಕ್ಷೆಗಳನ್ನು ತಯಾರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಬರಗಾಲ ಕಾಮಗಾರಿಯಲ್ಲಿ ಜಿಲ್ಲಾಧಿಕಾರಿಗಳು 4 ಕೊಳವೆ ಬಾವಿಗಳನ್ನು ತೋಡಲು ಇತ್ತೀಚೆಗೆ ಮಂಜೂರು ಮಾಡಿದ್ದಾರೆ.

(10) ಆಕ್ಟಾಯ್ ಜಾರಿಗೊಳಿಸುವ ಬಗ್ಗೆ ಇರುವ ವಿವಾದದ ಬಗ್ಗೆ

ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ಆಕ್ಟಾಯ್‌ನ್ನು ಮತ್ತೆ ಜಾರಿಗೆ ತರುವ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ವರ್ತಕರಲ್ಲಿ ಗೊಂದಲ ಉಂಟಾಗಿದೆ. ಆಕ್ಟಾಯ್ ಪದ್ಧತಿಯನ್ನು ರದ್ದುಪಡಿಸುವ ಸಂದರ್ಭದಲ್ಲಿ ಸರ್ಕಾರವು ಹಲವಾರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಒಂದು ನಿರ್ಣಯವನ್ನು ಮಾಡಿದೆ. ಈಗ ಆಕ್ಟಾಯ್ ಪದ್ಧತಿಯನ್ನು ಮತ್ತೆ ಇದ್ದಕ್ಕಿದ್ದಹಾಗೆ ಜಾರಿಗೆ ತರುವುದಕ್ಕೆ ಬದಲಾಗಿ ಈ ಸದನ ಹಾಗೂ ಮೇಲ್ಮನೆಯ ಸದಸ್ಯರುಗಳನ್ನೊಳಗೊಂಡ ಜಂಟಿ ಸಲಹಾ ಸಮಿತಿಯನ್ನು